ಪರಿಸ್ಥಿತಿಯಲ್ಲಿ ನೀನಿದ್ದಿದ್ರೆ ಹೇಗೆ ನಿಭಾಯಿಸುತ್ತಿದ್ದೆ?' ಹೀಗೆ ನನ್ನ ಪರಿಸ್ಥಿತಿಯನ್ನು ವಿವರಿಸಿದಾಗ ಅವಳಿಗೂ ನನ್ನ ಬಗೆಗೆ ಅಯ್ಯೋ ಅನಿಸಿತೇನೋ ಪಾಪ,

'ಇರ್ಲಿ ಬಿಡಿ, ಆಗಿದ್ದಾಯಿತು, ಇನ್ನೇನು ಮಾಡೋದಿಕ್ಕಾಗುತ್ತೆ' ಎಂದು ಅವಳು ತನ್ನನ್ನು ತಾನೇ ಸಮಾಧಾನಿಸಿಕೊಂಡಿದ್ದಳು. ಮುಂದೆ ನಾವ್ಯಾವತ್ತೂ ಗಂಡ-ಹೆಂಡತಿಯಂತೆ ಬದುಕಲೇ ಇಲ್ಲ.

ನಂತರದ ದಿನಗಳಲ್ಲಿ ಅವಳಿಗೆ ಬೆಳಗ್ಗೆಯಿಂದ ಸಂಜೆಯವರೆಗೆ ಮನೆಯಲ್ಲೇ ಕುಳಿತಿರುವುದು ಬೇಸರವೆನಿಸಿ ವಕೀಲರೊಬ್ಬರ ಆಫೀಸ್‌ನಲ್ಲಿ ಕೆಲಸಕ್ಕೆ ಸೇರಿದಳು. ಅದರಿಂದ ನನಗ್ಯಾವ ತೊಂದರೆಯಿಲ್ಲವಾದರೂ, ಅಮ್ಮ ಸ್ವಲ್ಪ ಪಿರಿಪಿರಿ ಮಾಡುವುದಕ್ಕೆ ಶುರುಮಾಡಿದ್ದರು. ನನ್ನ ಸ್ವಾತಂತ್ರ್ಯಕ್ಕವಳು ಅಡ್ಡಿಬರುತ್ತಿಲ್ಲವೆನ್ನುವಾಗ ನಾನಾದರೂ ಅವಳ ಇಷ್ಟಕ್ಕೆ ಯಾಕೆ ಅಡ್ಡಿಯಾಗಲಿ, ಪಾಪ ಈಗಾಗಲೇ ಅವಳು ನನ್ನ ಸಲುವಾಗಿ ಸಾಕಷ್ಟು ನೊಂದವಳಿದ್ದಾಳೆ. ನಾನೇ ಅಮ್ಮನನ್ನು ಸುಮ್ಮನಾಗಿಸಿದ್ದೆ.

ಅದು ಅಷ್ಟಕ್ಕೇ ಸೀಮಿತವಾಗಿದ್ದಿದ್ದರೆ ಯಾವ ತೊಂದರೆಯೂ ಉಂಟಾಗುತ್ತಿರಲಿಲ್ಲ. ಕೆಲಸಕ್ಕೆ ಸೇರಿಕೊಂಡ ಸುಲೋಚನಾಳಿಗೆ ಶೇಷಾದ್ರಿಯ ಪರಿಚಯವಾಗಿದ್ದೇ ಅದವಳ ಸಾವಿಗೆ ಕಾರಣವಾಯಿತು!

ಸುಲೋಚನಾಳಿಗೆ ಶೇಷಾದ್ರಿಯ ಪರಿಚಯವಾಗಿ ಆ ಸ್ನೇಹ ಅದರ ಎಲ್ಲೆಯನ್ನು ಮೀರಿ ಮುಂದುವರಿದಿತ್ತೆನ್ನುವುದು ನನ್ನರಿವಿಗೆ ಬಾರದೆ ಇರಲಿಲ್ಲ. ಗಂಡನಾಗಿ ನಾನು ಪೂರೈಸಲಾಗದ ಅವಳ ಆಸೆ, ಆಕಾಂಕ್ಷೆಗಳು ಈ ರೀತಿಯಿಂದಲಾದರೂ ನೆರವೇರಲಿ ಎಂದು ನಾನು ಕಣ್ಣುಮುಚ್ಚಿಕೊಂಡು ಸುಮ್ಮನಿದ್ದೆ. ಹೀಗೆ ಮುಂದುವರೆದ ಅವರ ಸ್ನೇಹ ಶೇಷಾದ್ರಿ ನಮ್ಮ ಮನೆಗೆ ಬಂದು ಹೋಗುವಷ್ಟರ ಮಟ್ಟಿಗಿನ ಸಲುಗೆಯಾಗಿ ಬೆಳೆಯಿತು. ಶೇಷಾದ್ರಿ ಮನೆಗೆ ಬಂದಾಗಲೆಲ್ಲ ನನ್ನಮ್ಮನನ್ನು ಮೆಚ್ಚಿಸುವ ರೀತಿಯಲ್ಲಿ ಮಾತನಾಡುತ್ತಿದ್ದು, ಅಮ್ಮನಿಗೆ ಅವನ ಬಗೆಗೆ ಒಳ್ಳೆಯ ಅಭಿಪ್ರಾಯವಿತ್ತು.

ಹೀಗೆ ಸುಮಾರು ದಿನಗಳು ಗಪ್‌ಚುಪ್ ಅನ್ನುವ ರೀತಿಯಲ್ಲೇ ಸರಿದುಹೋದವು. ಅದು ಅಮ್ಮ ಅಕ್ಕನ ಮನೆಗೆ ಹೋಗಿದ್ದ ದಿನಗಳು. ಅಮ್ಮ ಒಮ್ಮೆ ಅಕ್ಕನ ಮನೆಗೆ ಹೋದಳೆಂದರೆ ಬರುವುದು ವಾರಕಾಲ ಬಿಟ್ಟೇ. ಅದೂ ಬರೋದಿದ್ರು ಮುಂಚಿನ ದಿನವೇ ಕರೆ ಮಾಡಿ ವಿಷಯ ತಿಳಿಸಿರುತ್ತಿದ್ದರು. ಆದ್ರೆ ಆ ದಿನ ಅಕ್ಕ ಮತ್ತು ಭಾವ ಅರ್ಜೆಂಟ್ ಕೆಲಸದ ಮೇಲೆ ಬೆಂಗಳೂರಿಗೆ ಹೋಗಬೇಕಾಗಿ ಬಂದುದರಿಂದ, ಭಾವ ಅಮ್ಮನನ್ನು ಕರೆತಂದು ಮನೆಮುಂದೆ ಇಳಿಸಿ, ಮನೆಗೂ ಬಾರದೆ ಹೊರಟು ಹೋಗಿದ್ದರಂತೆ. ಅಮ್ಮ ಮನೆಬಾಗಿಲಿಗೆ ಬಂದಾಗ ಬಾಗಿಲು ಅರೆ ತೆರೆದಂತಿದ್ದು ಅವರದನ್ನು ಪೂರ್ತಿ ತಳ್ಳಿಕೊಂಡು ಒಳಗಡಿಯಿರಿಸುವಾಗ ನಾಲ್ಕು ವರ್ಷದ ಖುಷಿ ಚಾವಡಿಯ ತುಂಬಾ ಆಟಿಕೆಗಳನ್ನು ಹರಡಿಕೊಂಡು ಆಟವಾಡುತ್ತಿದ್ದಳು. ರೂಮಿನೊಳಗಡೆ ಗಂಡು-ಹೆಣ್ಣು ಮಾತನಾಡಿಕೊಂಡು ನಗುವ ಕಲರವ ಕೇಳಿಸಿದ್ದೇ ಅಮ್ಮಾ,

'ಕರುಣಾ... ಏ... ಕರುಣಾಕರ..' ಎಂದು ಕೂಗಿದರು. ತಟ್ಟನೆ ಹೊರಬಂದು ನಿಂತಿದ್ದು ಸುಲೋಚನಾ,

'ಕರುಣಾಕರ ಕೆಲಸಕ್ಕೆ ಹೋಗಿಲ್ವೇನೆ?' ಕೈಯಲ್ಲಿದ್ದ ಚೀಲವನ್ನು ನೆಲದಲ್ಲಿಡುತ್ತಾ ಕೇಳಿದ್ದರಂತೆ ಅಮ್ಮ. ಅಷ್ಟೊತ್ತಿಗೆ ಕೋಣೆಯೊಳಗಿನಿಂದ ಶೇಷಾದ್ರಿ ಹೊರಬಂದು ನಿಂತನಂತೆ. ಅಮ್ಮನಿಗೆ ಸಿಡಿಲು ಬಡಿದಂತಾಯ್ತು. ಮುಂದೆ ಮನೆಯಲ್ಲಿ ನಡೆದಿದ್ದು ದೊಡ್ಡದೊಂದು ರಾಮಾಯಣವೇ... ನಾನು, ಸುಲೋಚನಾ ಮತ್ತು ಅಮ್ಮನ ಕೈಯಲ್ಲಿ ಸಿಲುಕಿಕೊಂಡ ಅಡಕತ್ತರಿಯ ಅಡಿಕೆಯಂತಾಗಿದ್ದೆ. ಅಮ್ಮಾ ಎಷ್ಟು ಹಾರಾಡಿದರೂ ಸುಲೋಚನಾ ಕ್ಯಾರೇ ಅನ್ನಲಿಲ್ಲ. ನನಗೆ ಅವಳ ಜೊತೆ ಮಾತನಾಡಲು ಬಾಯೇ ಇರಲಿಲ್ಲ. ಕೊನೆಗೆ ಶೇಷಾದ್ರಿ ಇನ್ನು ಈ ಮನೆಯ ಹೊಸಿಲು ತುಳಿಯಬಾರದು ಹಾಗೂ ಸುಲೋಚನಾ ಅವನ ಸ್ನೇಹವನ್ನು ಬಿಡಬೇಕು, ಅನ್ನುವಲ್ಲಿಗೆ ಬಂದು ನಿಂತಿತು ಮಾತು. ಆದರೆ ಸುಲೋಚನಾ ಇದನ್ನು ಎಲ್ಲಿ ಒಪ್ಪಿಕೊಳ್ಳುತ್ತಾಳೆ. ಕೊನೆಗೆ ನಾನು, 'ನೋಡು ನೀನು ಅವನ ಸ್ನೇಹವನ್ನು ಬಿಡು ಎಂದು ನಾನು ಹೇಳುವುದಿಲ್ಲ. ಅಮ್ಮನಿಗೆ ಗೊತ್ತಾಗದಂತೆ ಹೊರಗಿನಿಂದ ಹೊರಗೆ ನಿಮ್ಮ ಸ್ನೇಹವಿರಲಿ. ಆದ್ರೆ ಅವನನ್ನು ಮನೆಗೆ ಮಾತ್ರ ಕರೆತರಬೇಡ' ಎಂದು ಸಮಾಧಾನಿಸಿದೆ.

'ಆಯ್ತು. ಈ ಮನೆಗವರನ್ನು ಕರೆದುಕೊಂಡು ಬರುವುದಿಲ್ಲ. ನಾನೇ ಅವರ ರೂಮಿಗೆ ಹೋಗ್ತೇನೆ' ಅವಳು ಸಿಟ್ಟಿನಿಂದ ನುಡಿದಳು.

'ಆಯ್ತು ಮಾರಾಯಿತಿ. ಒಟ್ಟಿನಲ್ಲಿ ಅಮ್ಮನಿಗೆ ಯಾವ